ನಿಯಮಾವಳಿಗಳನ್ನು ಮಾಡುವುದಕ್ಕೆ ತಡವಾಗಿರುವುದು ಕೋರ್ಟಿನ ಒಂದು ವಿಚಾರದಲ್ಲಿ, ಕೋರ್ಟಿನಲ್ಲಿ ಅದಕ್ಕೆ ತಡೆಯಾಜ್ಞೆ ಇರುವುದರಿಂದ ಎಂದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಹೇಳಿದಂತೆ ಪುತ್ತೂರು, ಬೆಂಗಳೂರಿನಲ್ಲಿ ಅಷ್ಟೇ ಅಲ್ಲ, ಎಲ್ಲಾ 105 ಡಿಪೋಗಳಲ್ಲೂ ಇವತ್ತು ಈ ವೇಕೆನ್ಸಿಗಳು ಇರುವುದು ನಿಜ. ಇನ್ನು 6 ತಿಂಗಳಲ್ಲಿ ಎಲ್ಲಾ ವೇಕೆನ್ಸಿಗಳನ್ನು ಫಿಲಪ್ ಮಾಡಲಾಗುತ್ತದೆ.

ಶ್ರೀ ಡಿ.ವಿ. ಸದಾನಂದ ಗೌಡ:- ಇನ್ನು 2-3 ತಿಂಗಳಲ್ಲಿ ಸರಿ ಮಾಡುತ್ತೀರಿ ಎಂಬ ಬಗ್ಗೆ ನಮಗೆ ತಮ್ಮ ಮೇಲೆ ವಿಶ್ವಾಸ ಇದೆ. ಈಗ ಕೆ.ಎಸ್.ಆರ್.ಟಿ.ಸಿ ನೈಟ್ ಸರ್ವೀಸ್‌ಗಳೀನು ಇವೆ ಆದರಲ್ಲಿ ತಾವೇಕೆ ಕಂಡಕ್ಟರ್‌ಗಳನ್ನು ಹಾಕುವುದಿಲ್ಲ, ಬರೀ ಡ್ರೈವರ್‌ಗಳು ಮಾತ್ರ ಇರುತ್ತಾರೆ. ಮೊನ್ನೆ ಕುಂಬ್ಳೆ ಸುಂದರರಾಯರು ಅರ್ಧದಲ್ಲಿ ಕುಣಿಗಲ್‌ನಲ್ಲಿ ಸಿಕ್ಕಿ ಬಿದ್ದಿದ್ದರು. ಮೊನ್ನೆ ಅಂಗಾರ್‌ರವರು ಕೂಡ ಅರ್ಧದಲ್ಲಿ ಸಿಕ್ಕಿ ಬಿದ್ದಿದ್ದರು. ಕೇವಲ ಕಂಡಕ್ಟರ್ ಇಲ್ಲದೇ ಬರೀ ಚಾಲಕ ಇರುವಂತಹ ಸಂದರ್ಭದಲ್ಲಿ ವಾಹನ ಕೆಟ್ಟರೆ ಆದರ ರಿಪೇರಿಗೆ ಆಕ್ಕಪಕ್ಕದಲ್ಲಿ ಬದಲಿ ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನೇನಾದರೂ ತುಂಬಲಿಕ್ಕೆ ವ್ಯವಸ್ಥೆ ಮಾಡುತ್ತೀರೋ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಕೆ.ಎಸ್.ಆರ್.ಟಿ.ಸಿ.ಯ ಕಾಸ್ಟ್ ಆಫ್ ಆಪರೇಷನ್ ಅನ್ನು ಕಡಿಮೆ ಮಾಡಬೇಕೆಂದು ಕಂಡಕ್ಟರ್ ಇಲ್ಲದೆ ಬಸ್‌ಗಳನ್ನು ಓಡಿಸಬೇಕೆಂಬುದು ಇರತಕ್ಕಂತಹ ವಿಚಾರ. ಆದ್ದರಿಂದ ಮತ್ತೆ ಕಂಡಕ್ಟರ್‌ಗಳನ್ನು ಎಲ್ಲಾ ರೂಟುಗಳಲ್ಲಿ ಹಾಕಬೇಕೆಂಬ ವಿಚಾರ ನಮ್ಮ ಮುಂದೆ ಇಲ್ಲ. ಆದ್ದರಿಂದ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಹಾಕಿಸುತ್ತೇವೆ. ಕಾಸ್ಟ್ ಆಫ್ ಆಪರೇಷನ್‌ಅನ್ನು ಕಡಿಮೆ ಮಾಡಬೇಕಾಗಿದೆ. ಅರ್ನಿಂಗ್ಸ್ ಜಾಸ್ತಿ ಮಾಡಬೇಕಾಗಿದೆ.

ಶ್ರೀ ಡಿ.ವಿ. ಸದಾನಂದ ಗೌಡ:- ನೈಟ್ ಸರ್ವೀಸ್‌ಗಳಿಗೆ ಒಳ್ಳೆಯ ಕಂಡೀಷನ್ ಇರುವ ಬಸ್‌ಗಳನ್ನು ಹಾಕಬೇಕು ಎನ್ನುವುದು ನಮ್ಮ ವಿನಂತಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇಂದು ನಾನು ಇಲ್ಲಿ ವಚನ ಕೊಡುತ್ತಿದ್ದೇನೆ. ಇನ್ನು 6 ತಿಂಗಳೊಳಗೆ ಕರ್ನಾಟಕದಲ್ಲಿ ಲಕ್ಸುರಿ, ಸೆಮಿಲಕ್ಸುರಿ ಬಸ್‌ಗಳು ಮೂರುವರೆ ಲಕ್ಷ ಕಿಲೋಮೀಟರ್‌ಗಿಂತಲೂ ಹೆಚ್ಚು ಓಡಾಡಿ ಸ್ಕ್ರಾಪ್ ಆಗಬೇಕಾಗಿರತಕ್ಕಂಥಾ ಬಸ್‌ಗಳು 400ಕ್ಕೂ ಹೆಚ್ಚು ಇದೆ. ಆ ಎಲ್ಲಾ ಬಸ್‌ಗಳನ್ನು 6 ತಿಂಗಳೊಳಗೆ ರೀಪ್ಲೇಸ್ ಮಾಡಿಸುತ್ತೇವೆ.

ವಿಷಯ:- ಕೋಲಾರ ಜಿಲ್ಲೆ ಮೂಲಕ ತಾಲ್ಲೂಕು ಆಶ್ರಯ ಯೋಜನೆ ನಿವೇಶನಗಳು.

296 (325) **ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿಲ್ಲಿ ಕರಿನಾಯಕನ ಹಳ್ಳಿ ಗ್ರಾಮದ ಸರ್ವೆ ನಂ. 44ರ ಸರ್ಕಾರಿ ಗುಂಡುತೋಪಾದ 4-31 ಗುಂಟೆ ಜಮೀನನ್ನು ಆಶ್ರಯ ಯೋಜನೆಯಡಿ ಎಷ್ಟು ನಿವೇಶನಗಳನ್ನಾಗಿ ವಿಂಗಡಿಸಿ ಹಂಚಲಾಗಿದೆ?

ಆ) ಈ ನಿವೇಶನಗಳನ್ನು ಪಡೆದವರಿಗೆ ನಿವೇಶನಗಳನ್ನು ಸ್ವಾಧೀನ ನೀಡಲಾಗಿದೆಯೇ?

ಇ) ಫಲಾನುಭವಿಗಳು ಸದರಿ ಜಮೀನನ್ನು ವಶಪಡಿಸಿಕೊಳ್ಳಲು ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಆ) ಮಾಲೂರು ತಾಲ್ಲೂಕು ಕಸಬಾ ಹೋಬಳಿ ಕರಿನಾಯ್ಕನಹಳ್ಳಿ ಗ್ರಾಮದ ಸರ್ವೆ ನಂ. 44ರಲ್ಲಿ ಒಟ್ಟು 100 ನಿವೇಶನಗಳ ನಕ್ಷೆಯನ್ನು ತಯಾರಿಸಿದ್ದು ಇದರಲ್ಲಿ 34 ಮಂದಿ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ.

ಆ) ಸದರಿ ಜಮೀನಿನ ಬಗ್ಗೆ ಬಗರ್ ಹುಕುಂ ಸಾಗುವಳಿದಾರ ಶ್ರೀ ಚೆನ್ನಪ್ಪನವರು ಸಹಾಯಕ ಆಯುಕ್ತರು, ಕೋಲಾರ ಇವರ ನ್ಯಾಯಲಯದಲ್ಲಿ ಮೇಲ್ಮನವಿ ಪ್ರಕರಣ ದಾಖಲಾಗಿರುವುದರಿಂದ ಇನ್ನೂ ಅಂತಿಮವಾಗಿ ತೀರ್ಮಾನವಾಗದೇ ಇರುವುದರಿಂದ ನಿವೇಶನ ಪಡೆದ ಫಲಾನುಭವಿಗಳಿಗೆ ಸ್ವಾಧೀನ ನೀಡಿರುವುದಿಲ್ಲ.

ಇ) ಜಮೀನಿನ ಬಗ್ಗೆ ನ್ಯಾಯಲಯದಲ್ಲಿ ಪ್ರಕರಣ ನಡೆಯುತ್ತಿರುತ್ತದೆ. ಶ್ರೀ ನಾರಾಯಣರೆಡ್ಡಿ ಗ್ರಾಮ ಪಂಚಾಯತಿ ಸದಸ್ಯರು ಇವರು ಫಲಾನುಭವಿಗಳ ಪರವಾಗಿ ಭೂ ಮಾಲೀಕರು ಕಿರುಕುಳ ನೀಡುತ್ತಿದ್ದಾರೆಂದು ದಿನಾಂಕ 26-6-96 ರಂದು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದು ಇದು ವಿಚಾರಣಾ ಹಂತದಲ್ಲಿರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ತಮಗೆ ಗೊತ್ತಿದೆ. ಸರ್ಕಾರಕ್ಕೆ ಸೇರಿದ ಅನೇಕ ಕೆರೆ ಕಟ್ಟೆ, ಗುಂಡು ತೋಪುಗಳನ್ನು ಪರಭಾರೆ ಮಾಡುವ ಬಗ್ಗೆ ತಮಗೆ ಗೊತ್ತಿದೆ ಅಧಿಕಾರಿಗಳೇ ಶಾಮೀಲಾಗಿ ಮಾಡುತ್ತಿದ್ದಾರೆ. ಈ ಪರ್ಟಿಕ್ಯುಲರ್ ವಿಚಾರದ ಬಗ್ಗೆ ಅಧಿಕಾರಿಗಳನ್ನು ಸಂಪರ್ಕ ಮಾಡಿ ನನಗೆ ಸಮಾಧಾನವಾಗದೆ ನೀವು ನ್ಯಾಯ ಒದಗಿಸಿಕೊಡುತ್ತೀರಿ ಎಂದು ಇಲ್ಲಿ ಪ್ರಶ್ನೆ ಎತ್ತಿದ್ದೇವೆ. 1991-92 ರಲ್ಲಿ ನಿವೇಶನ ಮಾಡಿ ನೂರು ಜನರಿಗೆ ಹಂಚಿದ್ದೇವೆಂದು ಹೇಳಿದ್ದಾರೆ. 10-12 ಜನ ಪರಿಶಿಷ್ಟ ವರ್ಗ-ದವರಿಗೆ ಮನೆ ಕೂಡ ಮಂಜೂರು ಮಾಡಿದ್ದೀರಿ. ಇದ್ದಕ್ಕಿದ್ದ ಹಾಗೆ ಇದನ್ನು ಬಗರ್ ಹುಕುಂ ಮಾಡು-ತ್ತಿದ್ದೇನೆ ಎಂದು ಚೆನ್ನಪ್ಪ ಎಂಬುವವನು ಮೇಲ್ಮನವಿ ಸಲ್ಲಿಸಿದ ಎಂದು ಆದಕ್ಕೆ ಸ್ಟೇ ಕೊಟ್ಟಿದ್ದಾರೆಂದು ಹೇಳುತ್ತಾರೆ; 1980-81 ರಿಂದ 1991-92 ರವರೆಗೆ ನಿವೇಶನ ಕೊಡುವವರೆಗೆ ಅದು ಸರಕಾರೀ ಸ್ವಾಮ್ಯದಲ್ಲೇ ಇತ್ತು. ಖಾತೆ ಪಹಣಿ ಎಲ್ಲ ಸರಕಾರದ ಹೆಸರಿನಲ್ಲಿದೆ. ತಮ್ಮ ಉತ್ತರದಲ್ಲಿ "ಸದರಿ ಜಮೀನಿನ ಬಗ್ಗೆ ಬಗರ್ ಹುಕುಂ ಸಾಗುವಳಿದಾರ ಶ್ರೀ ಚೆನ್ನಪ್ಪನವರು, ಸಹಾಯಕ ಆಯುಕ್ತರು, ಕೋಲಾರ ಇವರ ನ್ಯಾಯಾಲಯದಲ್ಲಿ ಮೇಲ್ಮನವಿ ಪ್ರಕರಣವು ದಾಖಲಾಗಿರುವುದರಿಂದ ಇನ್ನೂ ಅಂತಿಮವಾಗಿ ತೀರ್ಮಾನವಾಗದೇ ಇರುವುದರಿಂದ ನಿವೇಶನ ಪಡೆದ ಫಲಾನುಭವಿಗಳಿಗೆ ಸ್ವಾಧೀನ ನೀಡಿರುವುದಿಲ್ಲವೆಂದು" ಹೇಳಿದ್ದೀರಿ ಸರಕಾರಿ ಜಮೀನಿನ ಗುಂಡು ತೋಪಿಗೆ ತಾವು ನೀವೇಶನವನ್ನು ಕೊಟ್ಟ ಮೇಲೆ 1980-81 ರಿಂದ 1991-92 ರವರೆಗೆ ಖಾತೆ ಇರುವಂತಹ ಕಾಲದಲ್ಲಿ ಇದ್ದಕ್ಕಿದ್ದಂತೆ ಬಗರ್ ಹುಕುಂ ಸಾಗುವಳಿ ಮಾಡಿದ್ದಾನೆಂಬ ದಾಖಲೆ ಎಲ್ಲಿಂದ ಬರುತ್ತದೆ? ಬಗರ್ ಹುಕುಂ ಸಾಗು–

ವಳಿ ಮಾಡಿದ್ದಾನೆಂದು ಮೇಲ್ಮನವಿ ಸಲ್ಲಿಸುವುದಕ್ಕೆ ಎಲ್ಲಿ ಅವಕಾಶ ಇದೆ? ಸರಕಾರೀ ಜಮೀನಿನಲ್ಲಿ ನಿವೇಶನ ರಚನೆ ಮಾಡಿದ ನಂತರ ಬಗರ್ ಹುಕುಂ ಸಾಗುವಳಿ ಮಾಡಿದ್ದೇನೆಂದು ಯಾರಾದರೂ ಸುಳ್ಳು ಅರ್ಜಿ ಕೊಟ್ಟರೆ ಎ. ಸಿ. ಯವರು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಿ ವಜಾ ಮಾಡಿ ಬಡವರಿಗೆ ಅಲ್ಲಿ ಮನೆ ಕಟ್ಟಿಕೊಳ್ಳಲು ನಿವೇಶನವನ್ನು ಕೊಡಲು ಅವಕಾಶ ಮಾಡಿಕೊಡಬಹುದಾಗಿತ್ತು. ತಹಸೀಲ್ದಾರ್ ಅವರ ಹತ್ತಿರ 5-9-92 ರಲ್ಲಿ ಹೋದಾಗ ಅವರು ಅದನ್ನು ವಜಾ ಮಾಡಿದ್ದಾರೆ. ಎ.ಸಿ. ಇದನ್ನು ಅಡ್ಮಿಟ್ ಮಾಡಿಕೊಂಡು ಈ ಗೊಂದಲವನ್ನು ಉಂಟು ಮಾಡಿದ್ದಾರೆ ಆದ್ದರಿಂದ ಈಗಲೇ ಸ್ಥಳ ತನಿಖೆ ಮಾಡಿ ದಾಖಲೆಗಳನ್ನು ನಾನು ತಮಗೆ ಕೊಡುತ್ತೇನೆ. ಬಡವರಿಗೆ ನಿವೇಶನವನ್ನು ಹಂಚಿಯಾಗಿದೆ. ಆ ಮನೆಗಳನ್ನು ಅವರು ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ? ಆ ಪ್ರಭಾವೀ ವ್ಯಕ್ತಿ ಯಾರೋ ಎ.ಸಿ.ಯವರು ಈ ಅಧಿಕಾರಿಗಳು ಶಾಮೀಲಾಗಿ ದೊಡ್ಡವನಿಗೆ ಅನುಕೂಲ ಮಾಡುವುದಕ್ಕೆ ಹೊರಟಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ?

(ಮಾನ್ಯ ಸದಸ್ಯರು ಮಾನ್ಯ ಅಧ್ಯಕ್ಷರಿಗೆ ದಾಖಲೆಯನ್ನು ಒದಗಿಸಿದರು)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ ಸರ್ವೆ ನಂ. 44 ರಲ್ಲಿ 4 ಎಕರೆ 31 ಗುಂಟೆ ಜಮೀನನ್ನು ನಿವೇಶನಕ್ಕೆ ಬಳಸಿಕೊಂಡಿದ್ದು ಅದರಲ್ಲಿ 9-1-92 ರಲ್ಲಿ ನೂರು ನಿವೇಶನಗಳನ್ನು ನಾವು ಹಂಚಿಲ್ಲ. ನೂರು ನಿವೇಶನಗಳನ್ನು ನಾವು ಫಾರ್ಮೇಷನ್ ಮಾಡಿದ್ದೇವೆ. ಅದರಲ್ಲಿ 30 ನಿವೇಶನಗಳನ್ನು ಹಂಚಿದ್ದೇವೆ. ಬಾಕಿ ಉಳಿಕೆ ಹಂಚಿಕೆ ಮಾಡುವ ಸಮಯದಲ್ಲಿ ಅವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಸ್ಟೇ ತಂದರು, ಆ ಸ್ಟೇ ವೆಕೇಟಾಯಿತು. ಆ ಸ್ಟೇ ವೆಕೇಟಾದ ಮೇಲೆ ಉಪ ವಿಭಾಗಾಧಿಕಾರಿಗಳು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದಾರೆ. ಆ ತಡೆಯಾಜ್ಞೆ ತೆರವು ಆದ ನಂತರ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡು ಅದನ್ನು ಹಂಚುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಅವರಿಗೆ ಗೈಡ್ ಮಾಡುತ್ತೇನೆ ಅವರು ಹೊಸ ಸಚಿವರಿದ್ದಾರೆ. ಸರ್ವೆ ನಂ. 44 ರಲ್ಲಿ 80 ರಿಂದ ಹಿಡಿದು 92 ರವರೆಗೆ ಸರಕಾರೀ ಖರಾಬು ಗುಂಡು ತೋಪು ಎಂದು ದಾಖಲೆಗಳು ಇವೆ. ಅದನ್ನು ನನಗೆ ಪ್ರೊಡ್ಯೂಸ್ ಮಾಡಿದ್ದಾರೆ. ಹೀಗಿದ್ದಾಗ ಏಕಾ ಏಕಿ ಒಬ್ಬರು ನಾನು ಬಗರ್ ಹುಕುಂ ಮಾಡುತ್ತಿದ್ದೆನೆ. ಇದು ನನಗೆ ಮಂಜೂರಾಗಿದೆ ಎಂದು ಹೇಳಿದಾಗ ಅಸಿಸ್ಟೆಂಟ್ ಕಮಿಷನರ್ ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಇದು ಬೋಗಸ್ ರೆಕಾರ್ಡ್ಸ್ ಎಂದು ಮಾಡಿದ್ದಾರೆ. ಆದ್ದರಿಂದ ಅವರ ಮೇಲೆ ಕ್ರಮ ಜರುಗಿಸಬೇಕೆಂದು ಹೇಳುತ್ತಿದ್ದಾರೆ. ಇದನ್ನು ನಾನು ಕಳಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅದು ಒಂದರ ಬಗ್ಗೆ ಮಾತು ಪ್ರಸ್ತಾಪ ಮಾಡುತ್ತಿಲ್ಲ. ಎ.ಸಿ.ಗೆ ಈ ಅಪೀಲನ್ನು ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ಎಲ್ಲಿ ಅಧಿಕಾರ ಇದೆ? ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಲ್ಲ ದಾಖಲೆಗಳು ಇವೆ. ಸರಕಾರೀ ಸ್ವಾಮ್ಯದಲ್ಲಿದೆ. ಅಲ್ಲಿ ಕಲ್ಲುಗಳನ್ನು ನೆಟ್ಟು ನಿವೇಶನಗಳನ್ನಾಗಿ ಫಾರಂ ಮಾಡಿದ ಮೇಲೆ ಅದನ್ನು ಕಿತ್ತುಕೊಂಡು ಹೋದರು. 20-11-91ರಲ್ಲಿ

ಡಿ.ಐ.ಜಿ. ಗೆ ಜನ ದೂರು ಕೊಟ್ಟರು, ತಹಸೀಲ್ದಾರರಿಗೆ ದೂರು ಕೊಟ್ಟರು ಬಿ.ಡಿ.ಓ. ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ; ಈ ಪ್ರಭಾವೀ ವ್ಯಕ್ತಿ ಲಕ್ಷಾಂತರ ಬೆಲೆ ಬಾಳುವ ಜಮೀನನ್ನು ಕಬಳಿಸುವುದಕ್ಕೋಸ್ಕರ ಮಾಡುತ್ತಿರುವ ಸಂಚು ಇದಾಗಿದೆ. ಬಡವರಿಗೆ ಅವನ್ನು ಹಂಚುವಾಗ ನಿವೇಶನಗಳನ್ನಾಗಿ ಫಾರ್ಮೇಷನ್ ಮಾಡುವಾಗ ಅವನು ಪ್ರವೇಶ ಮಾಡಲಿಲ್ಲ. ಅಧಿಕಾರಿಗಳು ಹೇಗೆ ಶಾಮೀಲಾಗುತ್ತಿದ್ದಾರೆ? ಜಿಲ್ಲಾಧಿಕಾರಿಗಳು ಹೇಗೆ ಸುಮ್ಮನೆ ಕುಳಿತಿದ್ದಾರೆ? ಬಿ.ಡಿ.ಓ. ತಹಸೀಲ್ದಾರ್ ಕ್ರಮ ತೆಗೆದುಕೊಂಡ ಮೇಲೆ ಎ.ಸಿ. ಏಕೆ ಇದಕ್ಕೆ ಎಂಟರ್‌ಟೈನ್ ಮಾಡಿದ?

ಶ್ರೀ ಹೆಚ್.ಡಿ. ರೇವಣ್ಣ:- ಇದರ ಬಗ್ಗೆ ನಾನು ಕೋಲಾರ ಡಿ.ಸಿ.ಯವರಿಗೆ ಬೇಕಾದರೆ ಬರೆಯುತ್ತೇನೆ. ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸುತ್ತೇನೆ. ಇದರಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಯಾರಾದರೂ ಶಾಮೀಲಾಗಿ ಪಹಣಿ ತಿದ್ದಿದರೆ ಬೇಕಾದರೆ ಸಿ.ಓ.ಡಿ.ಗೆ ರೆಫರ್ ಮಾಡುತ್ತೇನೆ.

ಅಧ್ಯಕ್ಷರು:- ಸಿ.ಓ.ಡಿ. ಗೆ ಏಕೆ ಸುಮ್ಮನೆ ರೆಫರ್ ಮಾಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ಕೇವಲ ಮಾಲೂರು ಯಾವುದೋ ಒಂದು ಉದಾಹರಣೆಗೆ ಅಲ್ಲ. ಖಾತೆ ಪಹಣಿ ಎಲ್ಲಾ ಸರಕಾರದ ಹೆಸರಿನಲ್ಲಿ ಇದೆ. ಎ.ಸಿ. ಸ್ಟೇ ಹೇಗೆ ಕೊಡುತ್ತಾನೆ?

ಶ್ರೀ ಹೆಚ್.ಡಿ. ರೇವಣ್ಣ:- ಯಾವ ರೀತಿ ವಿಚಾರಣೆ ಬೇಕೋ ಅದನ್ನು ಮಾಡಿಸುತ್ತೇನೆ.

ಅಧ್ಯಕ್ಷರು:- ಕೋರ್ಟಿಗೆ ವಕೀಲರು ಹೋಗುವಾಗ ಎಲ್ಲ ವಿಚಾರವನ್ನು ಎ.ಸಿ. ಮತ್ತು ಡಿ.ಸಿ. ಯವರ ಗಮನಕ್ಕೆ ತಂದಿರುವುದಿಲ್ಲ. ಪ್ರತಿವಾದಿಗಳು ಇದ್ದು ಸರಕಾರದ ಪರವಾಗಿ ಯಾರು ಹೇಳಿರುವುದಿಲ್ಲ. ಈ ಆಂಶವೆಲ್ಲಾ ಗಮನಕ್ಕೆ ತಂದ ಮೇಲೆ ಅವರು ಮಾಡುತ್ತಾರೆ. ನನಗೆ ಮಂಜೂರಾಗಿದೆ, ಮಂಜೂರಾಗಿರುವ ಜಮೀನನ್ನು ಕೊಟ್ಟುಬಿಟ್ಟರು ಎಂದು ಹೇಳಿರುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದು ಎರಡು ವರ್ಷವಾಯಿತು. ಇಲ್ಲಿರುವ ಅಧಿಕಾರಿಗಳು ಸರಕಾರದ ಪರವಾಗಿ ಕೆಲಸ ಮಾಡಬೇಕಾಗಿರುವವರು. ಯಾರೋ ಪ್ರಭಾವ ಇರುವಂತಹ ರಾಜಕಾರಣಿಗಳ ಜೊತೆ ಶಾಮೀಲಾಗಿ ಇಂತಹ ಕೆಲಸ ಮಾಡುತ್ತಿದ್ದಾರೆ. ಬಡವರಿಗೆ ಈಗಾಗಲೇ ಮನೆ ಮಂಜೂರಾಗಿದೆ ನೀವು ಹೇಳಿದ ಹಾಗೆ 30 ನಿವೇಶನಗಳನ್ನು ಹಂಚಿದ್ದೇವೆ. ಬೇರೆ ಕಡೆ ಇಂತಹ ಘಟನೆಗಳು ಆಗಬಾರದು ಅಂದರೆ ಆ ಎ.ಸಿ. ಯಾರು ಇದ್ದಾನೆ ಬೇರೆಯವರ ಜೊತೆ ಶಾಮಿಲಾಗಿ ಇಂತಹ ವ್ಯವಹಾರಗಳನ್ನು ಮಾಡುತ್ತಿದ್ದಾನೆ ಅವರು ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ತಕ್ಷಣ ಬಡವರಿಗೆ ಪೊಸಿಷನ್ ಅನ್ನು ಕೊಡಿಸುತ್ತೀರಾ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಬಹಳ ಮುಖ್ಯವಾದ ವಿಷಯವೆಂದರೆ ಬಡವರಿಗೆ ನಿವೇಶನ ಕೊಡುವುದು. ಗುಂಡು ತೋಪು, ಕೆರೆ ಅಂಗಳ ಯಾವುದೇ ಕಾರಣಕ್ಕೂ ಮಂಜೂರು ಮಾಡುವ ಹಾಗಿಲ್ಲ. ಗೋಮಾಳ ಮಾತ್ರ ಮಂಜೂರು ಮಾಡಬಹುದೇ ಹೊರತು ಗುಂಡು ತೋಪು ಕೆರೆ ಆಂಗಳವನ್ನು ಮಂಜೂರು ಮಾಡಬಾರದು.

ಅಧ್ಯಕ್ಷರು:- ಕಂದಾಯ ಮಂತ್ರಿಗಳು ಬಂದ ಮೇಲೆ ಡಿ.ಸಿ. ಮತ್ತು ಎ.ಸಿ.ಯವರನ್ನು ಕರೆಸಿಕೊಂಡು ವಿವರ ತರಿಸಿ ಅವರು ಯಾರು ಸ್ಟೇ ಕೇಳಿದರು ಸ್ಟೇ ಕೇಳುವಾಗ ರೆಕಾರ್ಡಿನಲ್ಲಿ ಇದನ್ನು ಗುಂಡು ತೋಪು ಎಂದು ತೋರಿಸಿದ್ದಾರೋ ಇಲ್ಲವೇ ಗುಂಡು ತೋಪು ಎಂದು ತೋರಿಸಿದ್ದರೂ ಕೂಡ ಇಲ್ಲಿ ಸ್ಟೇ ಕೋಟ್ಟಿದ್ದಾರೆಯೇ ಎಂದು ನೋಡಿಕೊಂಡು ಆಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಂದು ವೇಳೆ ಗುಂಡು ತೋಪು ಎಂದು ನಮೂದು ಮಾಡಿದ್ದರೂ ಕೂಡ ಎ.ಸಿ. ಸ್ಟೇ ಕೊಟ್ಟಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ದಿನಾಂಕ 5-2-92ರಂದು ಇವರು ಹೋದಾಗ ತಹಸೀಲ್ದಾರ್‌ರವರು ವಜಾ ಮಾಡಿದ್ದಾರೆ.

ಅಧ್ಯಕ್ಷರು:- ಕಂದಾಯ ಮಂತ್ರಿಗಳು ನೀವು ಇಬ್ಬರೂ ಕುಳಿತು ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:- ತಾವು ಹೇಳುತ್ತಿರುವುದು ನಿಜಕ್ಕೂ ಸರಿಯಾಗಿದೆ. ಏಕೆಂದರೆ ತಹಸೀಲ್ದಾರರು ಬಗರ್ ಹುಕುಂ ಸಮಿತಿ ಮುಂದೆ ಅರ್ಜಿ ಹಾಕಿದ್ದನ್ನು ವಜಾ ಮಾಡಿದ್ದಾರೆ. ಹಾಗೆ ವಜಾ ಮಾಡಿರುವುದರ ಮೇಲೆ ಉಪ ವಿಭಾಗಾಧಿಕಾರಿಯವರು ಸ್ಟೇ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಜಿಲ್ಲಾಧಿಕಾರಿಗಳ ಹಂತದಲ್ಲಿ ವಿವರವಾದ ವರದಿ ತರಿಸುತ್ತೇನೆ. ಕಂದಾಯ ಸಚಿವರನ್ನು ಕೂಡಾ ಕೇಳಿಕೊಳ್ಳುತ್ತೇನೆ. ಕಾನೂನು ಬಾಹಿರವಾಗಿ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸುತ್ತೇನೆ.

ಅಧ್ಯಕ್ಷರು:- ಸದನಕ್ಕೆ ತಿಳಿಸುತ್ತಾರೆ.

ವಿಷಯ:- ಅಕ್ರಮ ಸಾಗುವಳಿಯನ್ನು ಕ್ರಮಬದ್ಧಗೊಳಿಸುವುದು.

297 (2040) **ಶ್ರೀ ಎಂ. ಚಂದ್ರಪ್ಪ (ಭರಮಸಾಗರ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991ರಿಂದ ಈಚೆಗೆ ಸರ್ಕಾರಿ ಭೂಮಿಯನ್ನು ಉಳಿಮೆ ಮಾಡಿರುವ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅವಕಾಶ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶೇಕಡ 60 ರಿಂದ 70 ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ಜನಾಂಗದವರು ಭೂಮಿಯನ್ನು ಉಳುಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅರ್ಹ ಫಲಾನುಭವಿಗಳಿಗೆ ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಅವಕಾಶ ಯಾವಾಗಿನಿಂದ ಮಾಡ ಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಹೌದು